ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ.560 /2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಮಂಜುನಾಥ | ಪ್ರಮಾಣ ವಚನ ಭೋದಿಸಿದ ದಿನಾಂಕಃ 07-03-2024 |
| ತಂದೆಯ/ಗಂಡನ ಹೆಸರುಃ | ತಳವಾರ್ ತಿಮ್ಮಪ್ಪ | ಸಿ.ಡಬ್ಲ್ಯೂಃ1 |
| ವಯಸ್ಸುಃ | 48 ವರ್ಷ | ಪಿ.ಡಬ್ಲ್ಯೂಃ1 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಲೋಕದೊಳಲು | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಈ ಕೇಸಿನ ಆರೋಪಿ ಕೃಷ್ಣ ಅಲಿಯಾಸ್ ಕೃಷ್ಣೇಗೌಡ ಪರಿಚಯ ಇಲ್ಲ, ಚಾಸಾ-7 ಮತ್ತು 8 ರವರ ಪರಿಚಯ ಇಲ್ಲ. ಚಾಸಾ-9 ರವರ ನಮ್ಮ ಪಕ್ಕದ ಊರಿನವರು ಆದ್ದರಿಂದ ಪರಿಚಯ ಇದೆ. ಚಾಸಾ-10 ರಿಂದ 13 ರವರ ಪರಿಚಯ ಇಲ್ಲ. ಆಗೆಯೇ ಚಾಸಾ-14 ಮತ್ತು 15 ರವರ ಪರಿಚಯ ಕೂಡ ಇಲ್ಲ.

ಈಗ್ಗೆ 2-3 ವರ್ಷದ ಹಿಂದೆ ಬೊಮ್ಮನಕಟ್ಟೆ ಮುರಾರ್ಜಿ ಸ್ಕೂಲ್ ಬಳಿ ಅಪಘಾತ ಆದ ಸಂಬಂದ ಸಂಜೆ 4.30 ರಿಂದ 5 ಗಂಟೆಯಲ್ಲಿ ಆದ ಸಂಬಂದ ನಾವು ಬೈಕಿನಲ್ಲಿ ಹೋಗುವಾಗ ಮುಂದೆ ಕ್ಯಾಂಟರ್ ಲಾರಿ ಹೋಗುತಿತ್ತು ಆಪೋಸಿಟ್ ಬಂದ ವಾಹನ ಕ್ಯಾಂಟರ್ ಲಾರಿಗೆ ಡಿಕ್ಕಿಪಡಿಸಿತು. ಕ್ಯಾಂಟರ್ ಗಾಡಿ ಹೊಸದುರ್ಗ ಕಡೆ ಹೋಗುತಿತ್ತು. ದೊಡ್ಡ ಲಾರಿ ಹೊಸದುರ್ಗ ಕಡೆಯಿಂದ ವೇಗವಾಗಿ ಬರುತಿತ್ತು. ಸದರಿ ದೊಡ್ಡ ಲಾರಿಯ ನೊಂದಣಿ ಸಂಖ್ಯೆ ಹೇಳಲಾಗುವುದಿಲ್ಲ ಕ್ಯಾಂಟರ್ ಲಾರಿಯ ನೊಂದಣಿ ಸಂಖ್ಯೆ ಕೂಡ ಹೇಳಲಾಗುವುದಿಲ್ಲ.

ನಾನು ಬೈಕ್ ನಿಲ್ಲಿಸಿ ಹೋಗಿ ನೋಡಲಾಗಿ ಕ್ಯಾಂಟರ್ ಗಾಡಿಯ ಚಾಲಕ ಸ್ಥಳದಲ್ಲಿ ಮೃತಪಟ್ಟಿದ್ದು ಆತನ ತಲೆ ಓಪನ್ ಆಗಿತ್ತು. ಉಳಿದ ಯಾರ್ಯಾರು ಒಳಗೆ ಇದ್ದರು ಎಂದು ನೋಡಲಾಗಲಿಲ್ಲ ಅವರೆಲ್ಲಾ ಇಳಿದಿದ್ದರು. ಅವರಿಗೆಲ್ಲಾ ಸಣ್ಣ ಪುಟ್ಟ ಏಟಾಗಿರಬಹುದು. ಅವರ ಹೆಸರುಗಳು ನನಗೆ ಗೊತ್ತಾಗಲಿಲ್ಲ. ಮೃತನ ಡಿಎಲ್ ಸಿಕ್ಕಿತು ಅದರ ಮೂಲಕ ಅವರ ಕಡೆಯವರಿಗೆ ಪೋನ್ ಮಾಡಿ ತಿಳಿಸಲಾಯಿತು. ಪೊಲೀಸ್ ಠಾಣೆಗೆ ವಿಷಯ ತಿಳಿಸಲಾಯಿತು ಆಗ ಪೊಲೀಸರು ಠಾಣೆಗೆ ಕರೆಸಿ ನನ್ನ ಸಹಿ ಪಡೆದರು. ಈಗ ತೋರಿಸಿದ ದಾಖಲೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಪ್ರಥಮ ಮಾಹಿತಿ ಹೇಳಿಕೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನ ನಿಪಿ-1 ಎ ಎಂದು ಗುರುತಿಸಲಾಯಿತು.

ಅದಾದ ನಂತರ ಮಹಜರಕ್ಕೆ ಸ್ಥಳಕ್ಕೆ ಕರದಿದ್ದರು ಅಪಘಾತ ಆದ 4-5 ದಿನದ ನಂತರ

ಕರೆದಿದ್ದರು. ಅಲ್ಲಿ ಸ್ಥಳ ಮಹಜರ ಮಾಡಿದರು. ಸ್ಥಳ ಮಹಜರ ಕಾಲಕ್ಕೆ ನಾನು ಹಾಜರಿದ್ದೆನು. ಮಹಜರದಲ್ಲಿ ನನ್ನ ಸಹಿ ಇದೆ. ಈಗ ತೋರಿಸಿದ ಎರಡು ಪೊಟೊಗಳಲ್ಲಿ ನಾನು ಮತ್ತು ಇಬ್ಬರು ವ್ಯಕ್ತಿಗಳಿದ್ದು ಸಿಪಿಐ ಸಹ ಬಂದಿದ್ದಾರೆ ಸ್ಥಳ ಮಹಜರನ್ನು ಮುರಾರ್ಜಿ ಶಾಲೆಯ ಮುಂದೆ ಮಾಡಿದ್ದು ಪೊಟೊ ಕೂಡ ಅಲ್ಲಿಯೇ ತೆಗೆದಿದ್ದಾಗಿದೆ. ಸ್ಥಳ ಮಹಜರನ್ನು / ಅಪರಾದ ವಿವರ ನಮೂನೆ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪೊಟೊಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಪುನಃ ಕರೆಸಲಿಲ್ಲ. ಯಾವುದೇ ಪುನಃ ಹೇಳಿಕೆ ನೀಡಿಲ್ಲ. ಲಾರಿಯ ಚಾಲಕನನ್ನು ನೋಡಲಾಗಲಿಲ್ಲ ಕಾರಣ ಆತ ನೋಡುವಷ್ಟಕ್ಕೆ ಓಡಿ ಹೋಗಿದ್ದ. ಪುನಃ ಪೊಲೀಸರು ನನ್ನನ್ನು ಎಲ್ಲಿಯೂ ಕರೆಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಅಪಘಾತದ ದಿಃ 02-08-2021 ರಂದು ಆಯಿತು ಎಂದರೆ ಇರಬಹುದು. ಹೊಸದುರ್ಗ ಕಡೆಯಿಂದ ಬರುತ್ತಿದ್ದ ಲಾರಿಯ ನೊಂದಣಿ ಸಂಖ್ಯೆ ಕೆಎ -36-ಎ-0324 ಎಂದರೆ ಇರಬಹದು. ಆತ ಅತಿವೇಗ ಮತ್ತು ಅಜಾಗಕರೂಕತೆಯಿಂದ ಚಾಲನೆ ಮಾಡಿಕೊಂಡು ಬರುತಿದ್ದ ಎಂದರೆ ಸರಿ. ಕ್ಯಾಂಟರ್ ಲಾರಿಯ ನಂಬರ್ ಕೆಎ -14 ಎ -4347 ಆಗಿತ್ತು ಎಂದರೆ ಇರಬಹುದು. ಅಪಘಾತದಿಂದ ಎರಡೂ ವಾಹನಗಳಿಗೆ ಜಖಂ ಆಗಿತ್ತು ಎಂದರೆ ಕ್ಯಾಂಟರ್ ಲಾರಿ ಗೆ ಮಾತ್ರ ಜಖಂ ಆಗಿತ್ತು ಎಂದು ನುಡಿಯುುತ್ತಾರೆ.

ಅಪಘಾತ ಪಡಿಸಿದ ಲಾರಿಯಲ್ಲಿ ಸುಮಾರು 6 ಜನ ಇದ್ದರು ಎಂದರೆ ಸರಿ. ಅವರ ಹೆಸರು ವಿಳಾಸ ನಾನು ಕೇಳಿದ್ದೇನೆ ಎಂದರೆ ಸರಿಯಲ್ಲ. ಅವರ ಹೆಸರುಗಳು ಈಗ ಓದಿ ತೋರಿಸಿದಂತೆ 1. ಅನಿ ತಂದೆ ತಮ್ಮಯ್ಯ 2. ರಾಮಕೃಷ್ಣ , 3. ಸತೀಶ ತಂದೆ ರಾಜಯ್ಯ , 4. ಶೇಖರ್ ತಂದೆ ನಂಜಯ್ಯ 5. ಲೋಕೇಶ ತಂದೆ ತಮ್ಮಣ್ಣ 6. ಬೆಟ್ಟ ಸ್ವಾಮಿ ತಂದೆ ಕೃಷ್ಣೇಗೌಡ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಅವರೆಲ್ಲಾ ಮಂಡ್ಯಾದವರು ಎಂದು ಗೊತ್ತಾಯಿತು ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಚಾಸಾ-9 ಶಿವನಾಯ್ಕ ಕೂಡ ಇದ್ದರು ಎಂದರೆ ಸರಿ. ನಂತರ ಮೃತಪಟ್ಟಿದ್ದ ವ್ಯಕ್ತಿಯ ಹೆಸರು ಹನಮಂತಪ್ಪ ತಂದೆ ವೀರಪ್ಪ ,ನೆಲಹೊಗಲು ಗ್ರಾಮ , ಚನ್ನಗಿರಿ ತಾಲ್ಲೂಕು ದಾವಣಗರೆ ಎಂದು ಗೊತ್ತಾಯಿತು ಎಂದರೆ ಸರಿ ಮತ್ತು ಮೃತ ದೇಹವನ್ನು ಶವಾಗಾರಕ್ಕೆ ಯಾವುದೋ ವಾಹನಲ್ಲಿ ತಂದು ಹಾಕಿದೆವು ಎಂದರೆ ಸರಿ ಉಳಿದ 6 ಜನ ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಹೋದರು ಎಂದರೆ ಸರಿ .

ಮುಂದುವರೆದು ದಿಃ 06-08-2021 ರಂದು ನನ್ನನ್ನು ಸಿಪಿಐ ರವರು ಕಚೇರಿಗೆ ಕರೆಸಿ ಅಪಘಾತಪಡಿಸಿದ ಲಾರಿಯ ಚಾಲಕನನ್ನು ದಸ್ತಗಿರಿ ಮಾಡಿಕೊಂಡು ಬಂದಿದ್ದಾಗಿ ಆತನ ಹೆಸರು ಕೃಷ್ಣ ಅಲಿಯಾಸ್ ಕೃಷ್ಣೆಗೌಡ ತಂದೆ ಲೇಟ್ ಬೋರೆ ಗೌಡ , ಮತ್ತು ಡ್ರೈವರ್ ಕೆಲಸ ತೊಳಲಿ

ಗ್ರಾಮ ಮಳಕಟ್ಟೆ , ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಾನು ಆತನನ್ನು ನೋಡಿ ಆ ದಿನ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಮತ್ತು ಗುರುತಿಸಿ ಈಗ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಬಾಗವನ್ನು ಅಂದರೆ "ಈ ದಿವಸ ಅಂದರೆ ದಿಃ 06-08-2023 ರಂದು ಪೊಲೀಸರು ---------ಕೆಎ -36 ಎ -0324 ನೇ ನಂಬರಿನ ಲಾರಿಯ ಚಾಲಕ ನಂ.6 ತೊಳಲಿ ಗ್ರಾಮ ಮಳಕಟ್ಟೆ ಪೋಸ್ಟ್ , ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಎಂದು ತಿಳಿಯಿತು. ಈ ಅಪಘಾತವು ಕೆಎ -36 ಎ -0324 ನೇ ನಂಬರಿನ ಲಾರಿಯ ಚಾಲಕನಾದ ಕೃಷ್ಣ ಅಲಿಯಾಸ್ ಟಿ ವಿ ಕೃಷ್ಣೇಗೌಡ ತಂದೆ ಲೇಟ್ ಬೋರೇಗೌಡ ಈತನ ಅಜಾಗರೂಕ ವಾಹನ ಚಾಲನೆಯಿಂದ ಸಂಬವಿಸಿರುತ್ತದೆ ಎಂದು ಈ ನನ್ನ ಮರು ಹೇಳಿಕೆ ನೀಡಿರುತ್ತೇನೆ ಎಂಬ ಬಾಗವನ್ನು " ಸಾಕ್ಷಿ ಅಲ್ಲಗಳೆದ ಕಾರಣ ನಿಪಿ-5 ಎಂದು ಗುರುತಿಸಲಾಯಿತು. ನಾನು ಆ ರೀತಿ ಆರೋಪಿಯನ್ನು ಗುರುತಿಸಿ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-**

ವಾಹನ ದೊಡ್ಡ ಲಾರಿ ಹಿಂದಿನಿಂದ ನೋಡಿದ್ದಾಗಿ ಹೇಳಿದ್ದು ಅದು ಎಷ್ಟು ವೇಗವಾಗಿ ಹೊಗುತ್ತಿತ್ತು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಪ್ರತ್ಯಕ್ಷ ನೊಡದೇ ಇರುವುದರಿಂದಲೇ ಚಾಲಕನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ನಿಪಿ-2 ರ ಮಹಜರಿಗೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ ನಾನು ಮಾತ್ರ ಸಹಿ ಮಾಡಿ ಬಂದಿದ್ದೇನೆ ಎಂದು ನುಡಿಯುತ್ತಾರೆ.

ನನಗೆ ಈಗ ತೋರಿಸಿದ ನಿಪಿ-2 ರಲ್ಲಿನ ನಕ್ಷೆ ಸ್ಥಳದಲ್ಲಿ ನನ್ನ ಎದುರಿಗೆ ಮಾಡಿಲ್ಲ ಅದು ಎಲ್ಲಿ ತಯಾರಿಸಿದರು ನನಗೆ ಮಾಹಿತಿ ಇಲ್ಲ. ಆದ್ದರಿಂದ ನಿಪಿ-2 ರ ಸ್ಥಳ ಮಹಜರ ನನ್ನ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ಮತ್ತು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಅಪಘಾತ ಪ್ರತ್ಯಕ್ಷ ನೋಡಿಲ್ಲ ಮತ್ತು ಸ್ಥಳ ಪಂಚನಾಮೆ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಹೊಳಲ್ಕೆರೆ.